## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಅಸಲು ದಾವಾ ಸಂಖ್ಯೆ ನಂ.81/2017**

ಪಿ.ಡಬ್ಲ್ಯು 4

| | |
|---|---|
| ಸಾಕ್ಷಿದಾರರ ಹೆಸರು | – ಪ್ರಕಾಶ ದೇವೆಂದ್ರ ಸಿಂಗನಳ್ಳಿ |
| ತಂದೆಯ ಹೆಸರು | – ದೇವೆಂದ್ರ ಸಿಂಗನಳ್ಳಿ |
| ವಯಸ್ಸು | – 31 ವರ್ಷ |
| ಉದ್ಯೋಗ | – ಸಹಾಯಕ ಭೂಮಾಪಕರು |
| ವಾಸ್ತವ್ಯ | – ಕಲಘಟಗಿ |

(ಇಂದು ದಿನಾಂಕಃ 25-10-2024 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಬಿ.ಡಿ.ಎಸ್. ವಕೀಲರಿಂದ–**

ನಾನು 2014 ರಿಂದ 2022 ರವರೆಗೆ ಕುಮಟಾ ಭೂ ದಾಖಲೆಗಳ ಸಹಾಯಕ ನಿರ್ದೇಶನ ಕಚೇರಿಯಲ್ಲಿ ಸಹಾಯಕ ಭೂವಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಆದೇಶದ ಮೇರೆಗೆ ಕಲಭಾಗ ಗ್ರಾಮದ ಸ.ನಂ. 638/2 ಬ ನೇದರಲ್ಲಿ ಹದ್ದು ಬಸ್ತ ಅಳತೆ ಕುರಿತು ಆದೇಶ ಮಾಡಿದಂತೆ ಹಾಗೂ ಸದ್ರಿ ಪ್ರಕರಣವು ನನಗೆ ಹಂಚಿಕೆ ಆದಂತೆ, ಮೋಜಣಿ ದಿಃ 30-06-2017 ಎಂದು ನಿಗಧಿಪಡಿಸಿಕೊಂಡು 1 ನೇ ವಾದಿಯವರಿಗೆ ಹಾಗೂ ಲಗ್ತದಾರರಿಗೆ ಮೋಜಣಿ ನೊಟೀಸನ್ನು ನೀಡಿರುತ್ತೇನೆ. ಸದರಿ ದಿವಸದಂದು ಸ್ಥಳಕ್ಕೆ ಹಾಜರಾಗಿ ಸದ್ರಿ ಸ.ನಂ. ಗೆ ಸಂಬಂಧಪಟ್ಟ ಎಲ್ಲ ಹಿಸ್ಸೆಗಳ ಅಳತೆಯನ್ನು ಕೈಗೊಂಡು ಅರ್ಜಿದಾರರ ಹಿಸ್ಸೆಯಾದ 638/2ಬ ನೇದರ ಗಡಿಗಳನ್ನು ಗುರುತಿಸಿರುತ್ತೇನೆ. ಸದರಿ ಮೋಜಣಿ ವೇಳೆಗೆ ಸ.ನಂ. 638ಅ/7 ನೇದವರು ವಾದಿಗೆ ಸಂಬಂಧಿಸಿದ 1 ಗುಂಟೆ 2 ಆಣೆ ಕ್ಷೇತ್ರವನ್ನು ಒತ್ತುವರಿ ಮಾಡಿರುವ ಬಗ್ಗೆ

ಕಂಡುಬಂದಿರುತ್ತದೆ. ಸದರಿ ಮೋಜಣಿ ವೇಳೆಗೆ ಅರ್ಜಿದಾರರಾದ 1 ನೇ ವಾದಿಯವರು ಹಾಗೂ ಲಗ್ತುದಾರರಾದ ಜೀತನ್ ಜನಾರ್ಧನ ಪಾಯಿದೆ, ಗಜಾನನ ನಾರಾಯಣ ಶೇಟ್, ವಿನಯ ನಾಗಪ್ಪ ಶಾನಭಾಗ(1ನೇ ಪ್ರತಿವಾದಿ) ಹಾಜರಿದ್ದರು. ನಂತರ ಮೋಜಣಿ ಮಾಡಿದ ನಕ್ಷೆ ಹಾಗೂ ವರದಿಯನ್ನು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ ಕುಮಟಾ ರವರಿಗೆ ನೀಡಿರುತ್ತೇನೆ. ಅರ್ಜಿದಾರರು ದಾವಾ ಸ್ವತ್ತು ಹದ್ದುಬಸ್ತ ಕುರಿತು ಸಲ್ಲಿಸಿದ ಅರ್ಜಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿ.ಪಿ. 8 ನ್ನು ತೋರಿಸಿ, ಅದನ್ನು ನೋಡಿ ಗುರುತಿಸಿರುತ್ತಾರೆ. ಅರ್ಜಿದಾರರು ಹಾಗೂ ಲಗ್ತುದಾರರಿಗೆ ನೀಡಿದ ಹದ್ದುಬಸ್ತ ನೊಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿ.ಪಿ. 9 ನ್ನು ತೋರಿಸಿ, ಅದನ್ನು ನೋಡಿ ಗುರುತಿಸಿರುತ್ತಾರೆ. ದಾವಾ ಸ್ವತ್ತಿನ ಹದ್ದುಬಸ್ತ ಮಾಡಿದ ವರದಿ ಹಾಗೂ ನಕ್ಷೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿ.ಪಿ. 10 ನ್ನು ತೋರಿಸಿ, ಅದನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿ.ಪಿ. 10 ನ್ನು ನೋಡಿ ಅದರಲ್ಲಿ ಸ.ನಂ. 638ಅ/7 ನೇದವರು ವಾದಿಗೆ ಸಂಬಂಧಿಸಿದ 1 ಗುಂಟೆ 2 ಆಣೆ ಕ್ಷೇತ್ರವನ್ನು ಒತ್ತುವರಿ ಮಾಡಿದ ಜಾಗವನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ